ಉಪಾಧ್ಯಕ್ಷರು : ಹಾಗಿದ್ದರೆ ಬೇಡಿಕೆಯ ಬಗ್ಗೆ ಚರ್ಚೆ ಬೇಡವೇ? ಬಿಸಿನೆಸ್ ಅಡ್ವೈಸರಿ ಸಮಿತಿಯಲ್ಲಿ ತೀರ್ಮಾನವಾಗಿರುವಂತೆ ಸದನವನ್ನು ನಡೆಸುವುದೋ ಅಥವಾ ಅದನ್ನು ಬಿಟ್ಟು ನಡೆಸುವುದೋ ನೀವೇ ಹೇಳಿ? ಹೀಗಾದರೆ ಸದನವನ್ನು ಹೇಗೆ ನಡೆಸುವುದು? ಶೂನ್ಯ ವೇಳೆಗೆ 25 ನೋಟೀಸ್ ಇದೆ. ಇಂದು ವಾರದ ಕಡೆಯ ದಿನವಾಗಿರುವುದರಿಂದ ಸದನವನ್ನು ಎರಡು ಗಂಟೆಗೆ ಮುಕ್ತಾಯ ಮಾಡಿ ಎಂದು ನೀವೇ ಹೇಳುತ್ತೀರಿ, ಮತ್ತೆ ಶೂನ್ಯ ವೇಳೆಯಲ್ಲಿ ಅಷ್ಟು ನೋಟೀಸ್ ಕೊಡುತ್ತೀರಿ. ಹೀಗಾದರೆ ಹೇಗೆ? ಈಗ ಹದಿನೈದು ನಿಮಿಷ ಸಭೆಯನ್ನು ಮುಂದೂಡೋಣ. ತಾವೂ ಬನ್ನಿ ಚರ್ಚೆ ಮಾಡಿ ಅನಂತರ ಸಭೆ ಸೇರೋಣ.

ಈಗ ಸದನವನ್ನು ಹದಿನೈದು ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

(ಸದನವು 12.50ಕ್ಕೆ ಮುಂದೂಡಲ್ಪಟ್ಟು ಮತ್ತೆ ಹದಿನೈದು ನಿಮಿಷಗಳ ನಂತರ ಸೇರಲು ನಿಶ್ಚಿಯಿಸಿತು).

(ಸದನವು ಪುನಃ ಮಧ್ಯಾಹ್ನ 1.10 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರಾದ (ಶ್ರೀ ಚಂದ್ರಶೇಖರ ಎಂ. ಮಾಮನಿ) ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಪ್ರಕಟಣೆ

ಉಪಾಧ್ಯಕ್ಷರು : ಇನ್ನು ಮೇಲೆ ಬೇಡಿಕೆಗಳ ಮೇಲಿನ ಚರ್ಚೆ ಮುಗಿಯುವವರೆಗೆ ಪ್ರತಿ ದಿನ ಬೆಳಿಗ್ಗೆ ಬೇಡಿಕೆಗಳ ಮೇಲೆ ಚರ್ಚೆಯಾದ ನಂತರ ಮಧ್ಯಾಹ್ನ 3 ರಿಂದ 4 ಗಂಟೆಯವರೆಗೆ ಪ್ರಶ್ನೋತ್ತರ ತೆಗೆದುಕೊಳ್ಳಲಾಗುವುದು. ಪುನಃ 4 ಗಂಟೆಯಿಂದ ಬೇಡಿಕೆಗಳ ಮೇಲೆ ಪುನಃ ಚರ್ಚೆ ಮುಂದುವರೆಯುವುದು. ಇನ್ನು ಮೇಲೆ ಪ್ರತಿ ಸೋಮವಾರ ಸದನವು ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳುವುದು. ಪ್ರತಿ ಮಂಗಳವಾರ, ಗುರುವಾರ ಸದನವು ಬೆಳಿಗ್ಗೆ 10 ಗಂಟೆಗೆ ಸೇರಿದರೆ, ಪ್ರತಿ ಶುಕ್ರವಾರ ಸದನವು ಬೆಳಿಗ್ಗೆ 9.30ಕ್ಕೆ ಸಮಾವೇಶಗೊಳ್ಳಲಿದೆ.

ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಕಿರ್ಲೋಸ್ಕರ್ ಬ್ಯಾಟರೀಸ್ ಕಾರ್ಖಾನೆಯ ಕಾರ್ಮಿಕರ ಚಳುವಳಿ

+ ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಉಪ ಸಭಾಧ್ಯಕ್ಷರೆ, ರಾಜಾಜಿನಗರ ಕ್ಷೇತ್ರದಲ್ಲಿ ಒಂದು ಕಿರ್ಲೋಸ್ಕರ್ ಬ್ಯಾಟರೀಸ್ ಎಂಬ ಒಂದು ಕಾರ್ಖಾನೆ ಇದೆ. ಕಳೆದ 67 ದಿನಗಳಿಂದ ಅಲ್ಲಿನ ಕಾರ್ಮಿಕರು ತಮ್ಮ ನ್ಯಾಯಯುತವಾದ ಬೇಡಿಕೆಗಳಿಗೋಸ್ಕರ ಚಳುವಳಿ ನಡೆಸುತ್ತಾ ಬಂದಿದ್ದಾರೆ.17 ಜನ ಕಾರ್ಮಿಕರಿಗೆ ಯಾವುದೇ ಕಾರಣ ಕೊಡದೆ ಅಮಾನತ್ತುಗೊಳಿಸುವುದರ ವಿರುದ್ಧ ಈ ಚಳುವಳಿ ನಡೆಯುತ್ತಾ ಬಂದಿದೆ. ಇದುವರೆಗೆ ಕೂಡ ಆ ಆಡಳಿತ ಮಂಡಳಿ ಯಾವುದೇ

ಚರ್ಚೆಗೆ ಬರುವುದಕ್ಕೆ ಅವರು ತಯಾರಿಲ್ಲ. ಸರ್ಕಾರದ ಆದೇಶದ ಮೇರೆಗೆ ಯಾರು ಟ್ರೇಡ್ ಯೂನಿಯನ್ ಲೀಡರ್ಸ್ ಇದ್ದಾರೆ, ಒಬ್ಬರು ಅಧ್ಯಕ್ಷರು ಮತ್ತು ಒಬ್ಬರು ಪ್ರಧಾನ ಕಾರ್ಯದರ್ಶಿ ಇವರ ಬಗ್ಗೆ ಗುಪ್ತ ಮತದಾನವಾಗಬೇಕು. ಗುಪ್ತ ಮತದಾನದ ಮೂಲಕ ಇವರಿಗೆ ಬೆಂಬಲ ಇದೆ ಎಂದು ತೋರಿಸಿದರೆ ನಾವು ಮಾತುಕತೆಗೆ ಬರುತ್ತೇವೆ, ಸರ್ಕಾರದ ಆದೇಶದ ಮೇರೆಗೆ 6.4.98 ರಂದು ಗುಪ್ತ ಮತದಾನವಾಯಿತು. ಒಟ್ಟು 388 ಕಾರ್ಮಿಕರು ಕಾರ್ಖಾನೆಯಲ್ಲಿದ್ದರೆ, 360 ಜನ ಆ ಗುಪ್ತ ಮತದಾನದಲ್ಲಿ ಪಾಲ್ಗೊಂಡರು. ಇದೇ ಅಧ್ಯಕ್ಷರು ಇರಬೇಕೆಂದು 357 ಜನ ಹೇಳಿದ್ದಾರೆ. 99 ಪರ್ಸೆಂಟ್ ಹೇಳಿದ್ದಾರೆ. ಇವತ್ತು ಆ ಕಾರ್ಖಾನೆಯ ಕಾರ್ಮಿಕರು ಉಪವಾಸ ಮುಷ್ಕರ ಪ್ರಾರಂಭ ಮಾಡಿದ್ದಾರೆ 20ನೇ ತಾರೀಖು ವಿಧಾನ ಸೌಧ ಚಲೋ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಕೂಡಲೇ ಸರ್ಕಾರ ಇದರ ಮಧ್ಯೆ ಪ್ರವೇಶಿಸಿ ಕಾರ್ಮಿಕರ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಿ 17 ಜನ ಏನು ಅಮಾನತ್ತುಗೊಳಿಸಿದ್ದಾರೆ ಅದನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಆದೇಶ ಕೊಡಬೇಕು. ಜೊತೆಗೆ ಕಾರ್ಖಾನೆಯಲ್ಲಿ ಒಂದು ಆರೋಗ್ಯಕರವಾದ ವಾತಾವರಣ ಸೃಷ್ಟಿ ಮಾಡುವುದಕ್ಕೆ ಸರ್ಕಾರ ಇದರ ಮಧ್ಯೆ ಪ್ರವೇಶಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪ ಸಭಾಧ್ಯಕ್ಷರೆ, ಏನಾಗಿದೆ ಎಂದರೆ, ಮಾಲೀಕ ವರ್ಗ ಸರ್ಕಾರ ಅಂದರೆ ಅವರಿಗೆ ಬೇಜವಾಬ್ದಾರಿ. ಸರ್ಕಾರದವರು ಯಾರು ಹೇಳಿದರೂ ನಾವು ಕೇಳುವುದಿಲ್ಲ ಎನ್ನುವ ಹಂತದಲ್ಲಿದ್ದಾರೆ. ನಮ್ಮ ಕಾರ್ಮಿಕ ಇಲಾಖೆ ಈ ಬಗ್ಗೆ ತೀವ್ರ ಗಮನ ಹರಿಸಲಿಲ್ಲ ಎಂದರೆ, ಆ ಕಾರ್ಮಿಕರು ಬೀದಿಗೆ ಬರಬೇಕಾಗುತ್ತದೆ. ಈಗಾಗಲೇ ಕಿರ್ಲೋಸ್ಕರ್ ಕಂಪನಿಯವರು ಲಾಕ್ ಔಟ್ ಮಾಡಿದ್ದಾರೆ ಯಾರೇ ಕರೆದರೂ ನಾವು ಮಾತುಕತೆಗೆ ಬರುವುದಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ತೀವ್ರವಾಗಿ ಸರ್ಕಾರ ಈ ಬಗ್ಗೆ ಅವರ ಮೇಲೆ ಕ್ರಮ ಕೈಗೊಳ್ಳಲಿಲ್ಲ ಎಂದರೆ ನಾಳೆ ಅಶಾಂತ ವಾತಾವರಣ ಅಲ್ಲಿ ನಿರ್ಮಾಣವಾಗುತ್ತದೆ ಮತ್ತು ಇದರಿಂದ ತಮಗೆ ಹೇಳುತ್ತೇನೆ, ಅನೇಕ ಉತ್ತಮವಾದ ಬ್ಯಾಟರಿಗಳ ಉತ್ಪಾದನೆ ಸ್ಥಗಿತವಾಗುತ್ತದೆ. ಇದರಿಂದ ಬೇರೆ ಬೇರೆ ಕಾರ್ಖಾನೆಗಳು ಬರತಕ್ಕಂತಹ ವ್ಯವಸ್ಥೆ ಬರುತ್ತದೆ. ಆದ್ದರಿಂದ ಈ ಸಣ್ಣ ವಿಚಾರದಲ್ಲಿ ಆ ಮಾಲೀಕ ಯಾರಿಗೂ ಹೆದರದೆ ಕಾರ್ಮಿಕರೂ ಬೇಕಾಗಿಲ್ಲ. ಯಾರೂ ಬೇಕಾಗಿಲ್ಲ ಎನ್ನತಕ್ಕಂತಹ ಅತ್ಯಂತ ಕಠೋರವಾದ ವಿಚಾರದಲ್ಲಿ ಮಾಲೀಕರು ಇದ್ದಾರೆ. ಇವರು ಮೊದಲಿನಿಂದಲೂ ಅದೇ ರೀತಿ. ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ ಕಾರ್ಮಿಕರ ಶೋಷಣೆ ಮೊದಲಿನಿಂದಲೂ ನಿರಂತರವಾಗಿ ನಡೆಯುತ್ತಿದೆ. ಕಾರಣವೇನೆಂದರೆ, ಸರ್ಕಾರದ ಮೇಲೆ ಅವರಿಗೆ ಭಯವಿಲ್ಲ. ಕಾರ್ಖಾನೆಯ ಆಯುಕ್ತರಾಗಲಿ, ಕಾರ್ಮಿಕ ಇಲಾಖೆಯ ಸಚಿವರಾಗಲಿ ಕೂಡಲೆ ಅವರನ್ನೂ ಕರೆಯಬೇಕು. ಬರಲಿಲ್ಲ ಎಂದರೆ ಆ ಮಾಲೀಕತ್ವ ರದ್ದು ಮಾಡುವ ವ್ಯವಸ್ಥೆ ಮಾಡಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಕಾರ್ಮಿಕರು ಮತ್ತು ಮ್ಯಾನೇಜ್‌ಮೆಂಟ್ ನಡುವೆ ಬೆಂಗಳೂರಿನಲ್ಲಿ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ, ಕಳೆದ ಅಧಿವೇಶನ ನಡೆಯುವಾಗ ಇಂತಹದ್ದೇ ಒಂದು ಘಟನೆ ನಡೆಯಿತು. ಆ ಮಾಲೀಕನಿಗೆ ಸರ್ಕಾರ, ಕಾರ್ಮಿಕ ಮಂತ್ರಿ ಮತ್ತು ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ಎಲ್ಲರೂ ಪೋಲೀಸ್

ಎಸ್.ಪಿ.ಯವರನ್ನೇ ಕಳುಹಿಸಿ ಆತನನ್ನು ಕರೆದುಕೊಂಡು ಬರುವುದಕ್ಕೆ ಕಳುಹಿಸಿದರೂ ಆತ ಬರಲಿಲ್ಲ. ಬರದೆ ಎರಡು ದಿವಸ ಆದ ಮೇಲೆ ಅವನನ್ನು ಅರೆಸ್ಟ್ ಮಾಡುತ್ತೇವೆಂದು ಹೇಳಿ ಬರಬೇಕಾದ ಪರಿಸ್ಥಿತಿ ಬಂದಿತ್ತು. ಏಕೆ ಹೀಗಾಗಿದೆ ಎಂದರೆ, ಇಡೀ ಬೆಂಗಳೂರು ನಗರದಲ್ಲಿ ಇರತಕ್ಕಂತಹ ಖಾಸಗಿ ಕಾರ್ಖಾನೆ ಮಾಲೀಕರು ಅದರಲ್ಲೂ ಈ ಅಸಂಘಟಿತ ಕಾರ್ಮಿಕರು ಇರತಕ್ಕಂತಹ ಹೆಚ್ಚಿನ ಸಂದರ್ಭದಲ್ಲಿ ಯಾವುದೇ ಒಬ್ಬ ಮಾಲೀಕ ಸರ್ಕಾರಕ್ಕೆ ಹೆದರುತ್ತಿಲ್ಲ. ಕಾರ್ಮಿಕ ಕಾನೂನುಗಳನ್ನು ಜಾರಿ ಮಾಡುತ್ತಿಲ್ಲ. ಕಾರ್ಮಿಕರಿಗೆ ಸಂಬಂಧಪಟ್ಟಂತೆ ಕನಿಷ್ಟ ಕಾನೂನುಗಳನ್ನು ಜಾರಿ ಮಾಡದೆ ಸಂಬಳವನ್ನೂ ಕೊಡುವುದಿಲ್ಲ. ಎಂತಹ ವಿಚಿತ್ರವಾದ ಪರಿಸ್ಥಿತಿ ಎಂದರೆ ನೀವು ರಾಜೀನಾಮೆ ಕೊಟ್ಟರೆ ನಾವು ಸಂಬಳ ಕೊಡುತ್ತೇವೆ ಎಂದು ಮಾಲೀಕರು ಹೇಳುತ್ತಾರೆ. ನೀವು ರಾಜೀನಾಮೆ ಕೊಟ್ಟರೆ ನಾವು ಸಂಬಳ ಕೊಡುತ್ತೇವೆ, ಇಲ್ಲದಿದ್ದರೆ ಕೊಡುವುದಿಲ್ಲ ಎನ್ನುವ ಸ್ಥಿತಿಗೆ ಇವತ್ತು ಮಾಲೀಕರು ಬೆಂಗಳೂರು ನಗರದಲ್ಲಿ ತಲುಪಿದ್ದಾರೆ. ಅದರ ಭಾಗ ಇದು. ಎಲ್ಲಾ ಕಡೆ ಕಾರ್ಮಿಕರ ಸಮಸ್ಯೆ ಬಗ್ಗೆ ಯಾವುದೇ ರೀತಿಯಲ್ಲಿ ಪರಿಗಣನೆಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಸರ್ಕಾರದಿಂದ ಅವರ ಮೇಲೆ ಯಾವುದೇ ಹಿಡಿತ ಇಲ್ಲ. ಲೇಬರ್ ಡಿಪಾರ್ಟ್‌ಮೆಂಟ್ ಏನಿದೆ, ಆ ಕಾರ್ಮಿಕ ಇಲಾಖೆಯನ್ನು ಕಸದ ರೀತಿಯಲ್ಲಿ ನೋಡುತ್ತಾರೆ. ಯಾರಿಗೂ ಲೆಕ್ಕ ಇಡುವುದಿಲ್ಲ. ಆದ್ದರಿಂದ ಸರ್ಕಾರ ಆಲೋಚನೆ ಮಾಡಬೇಕು. ಲಕ್ಷಾಂತರ ಅಸಂಘಟಿತ ಕಾರ್ಮಿಕರು ಅದರಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಅವರಿಗೆ ರಕ್ಷಣೆ ಕೊಡುವುದಕ್ಕೆ ಸರ್ಕಾರ ಮುಂದೆ ಬಂದು ಮಾಲೀಕರನ್ನು ಕಾರ್ಮಿಕ ಅಧಿಕಾರಿಗಳಿಗೆ ತಲೆಬಾಗುವ ರೀತಿಯಲ್ಲಿ ಮಾಡದೆ ಹೋದರೆ ಬೆಂಗಳೂರು ನಗರದಲ್ಲಿ ಯಾವುದೇ ಕಾರ್ಮಿಕರಿಗೂ ರಕ್ಷಣೆ ಇಲ್ಲ. ಆ ರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಬಿ. ಸತ್ಯ ನಾರಾಯಣ (ಕಾರ್ಮಿಕ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಕಿರ್ಲೋಸ್ಕರ್ ಬ್ಯಾಟರೀಸ್ ಫ್ಯಾಕ್ಟರಿಯಲ್ಲಿ9.2.98 ರಂದು ಕಾರ್ಮಿಕರಿಗೆ ಬೇರೆ ರಾಜ್ಯಗಳಿಗೆ ವರ್ಗಾವಣೆ ಮಾಡಿದರು ಎನ್ನುವ ಕಾರಣಕ್ಕಾಗಿ 10.2.98 ರಿಂದ ಕಾರ್ಮಿಕರು ಮುಷ್ಕರ ಹೂಡಿದ್ದಾರೆ. ಇವರ ಜೊತೆ ಹೊರಗಡೆ ಟ್ರಾನ್ಸ್‌ಫರ್ ಮಾಡಿರುವುದರ ಬಗ್ಗೆ ಕೆಲವು ಕಾರ್ಮಿಕರನ್ನು ಸಸ್ಪೆಂಡ್ ಮಾಡಿರುವುದರ ಬಗ್ಗೆ ಕಾರ್ಮಿಕರು ಮುಷ್ಕರ ಹೂಡಿದ್ದಾರೆ. ಇಲಾಖೆಯವರು ಮಧ್ಯ ಪ್ರವೇಶ ಮಾಡಿ ಸಂಧಾನ ನೀಡುವ ಪ್ರಯತ್ನ ಮಾಡಿ ಇಲಾಖೆಯ ಅಧಿಕಾರಿಗಳು ಮಾತನಾಡಿದ ನಂತರ ನಾನು ಸಹ ಅವರನ್ನು, ಅಧಿಕಾರಿಗಳನ್ನು ಮತ್ತು ಫ್ಯಾಕ್ಟರಿಯ ಆಡಳಿತ ವರ್ಗದವರನ್ನು, ಕಾರ್ಮಿಕ ಮುಖಂಡರನ್ನು ಕರೆಯಿಸಿ ಇದರ ಬಗ್ಗೆ ಚರ್ಚೆ ಮಾಡಿ ಅವರ ಬೇಡಿಕೆಗಳ ಬಗ್ಗೆ ಇತ್ಯರ್ಥ ಮಾಡುವುದಕ್ಕೆ ನಾವು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಕಾರ್ಮಿಕರು ವರ್ಗಾವಣೆ ಮತ್ತು ಸಸ್ಪೆಂಡ್ ಮಾಡಿರತಕ್ಕಂಥ ಕ್ರಮವನ್ನು ಕೂಡಲೇ ರದ್ದು ಪಡಿಸಬೇಕೆಂದು ಕೇಳುತ್ತಿದ್ದಾರೆ. ಆದರೆ ಆಡಳಿತ ಮಂಡಳಿಯವರು ಹೇಳುತ್ತಾರೆ, ಕೂಡಲೇ ಫ್ಯಾಕ್ಟರಿಗೆ ಬಂದು ಅವರು ಕಾರ್ಯನಿರ್ವಹಿಸಲಿ, ನಂತರ ನಾವು ಅವುಗಳ ಬಗ್ಗೆ ಚರ್ಚೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತಾರೆ. ಆ ಕಾರಣಕ್ಕಾಗಿ ನಾನು ಕರೆದು ಮಾತನಾಡಿದ ಸಂದರ್ಭದಲ್ಲಿ ಕೆಲವೊಂದು ನಿರ್ಧಾರಗಳಿಗೆ ನಾವು ಬಂದೆವು. ಈ ಕಾರ್ಮಿಕರು ಕೂಡಲೇ

ಕಾರ್ಯೋನ್ಮುಖರಾಗಿ ಕೆಲಸಕ್ಕೆ ಹಾಜರಾಗಬೇಕು, ಆ ನಂತರ ಇದಕ್ಕಿಂತ ಮುಖ್ಯವಾಗಿ ಇಬ್ಬರು ಬಾಹ್ಯ ವ್ಯಕ್ತಿಗಳನ್ನು ಕಾರ್ಮಿಕ ಸಂಘಕ್ಕೆ ಅಧ್ಯಕ್ಷರು ಉಪಾಧ್ಯಕ್ಷರಾಗಿ ಆಯ್ಕೆ ಮಾಡಿಕೊಂಡಿದ್ದಾರೆ, ಅದನ್ನು ಮ್ಯಾನೇಜ್‌ಮೆಂಟ್‌ನವರು ಸಕ್ರಮ ಅಲ್ಲವೆಂದು ಅವರು ಒಪ್ಪಲಿಲ್ಲ. ಆ ಕಾರಣಕ್ಕಾಗಿ ಮೊದಲನೆಯದಾಗಿ ಈ ಒಂದು ಕಾರ್ಮಿಕ ಸಂಘದ ಪದಾಧಿಕಾರಿಗಳ ಚುನಾವಣೆಯನ್ನು ಕಾನೂನಿನ ಪ್ರಕಾರ ಅತಿ ಶೀಘ್ರದಲ್ಲಿ ಮಾಡತಕ್ಕಂಥದ್ದು, ಅದರಲ್ಲಿ ಯಾರು ಆಯ್ಕೆಯಾಗಿ ಬರುತ್ತಾರೆ ಅಂತಹವರನ್ನು ಅವರು ಗೌರವಿಸುವಂತಹ ವ್ಯವಸ್ಥೆಗೆ ಅವರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಮಾರನೆಯ ದಿವಸವೇ ಅವರ ಸಂಬಳವನ್ನು ಏನು ಬಾಕಿ ಇದೆ ಅವೆಲ್ಲವನ್ನೂ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಈ ಕಾರಣಕ್ಕಾಗಿ ನಾವು ಅವರಿಗೆ ಆ ರೀತಿ ಮಾಡಿ ಎಂದು ಸಜೆಸ್ಟ್ ಮಾಡಲಿಲ್ಲ, ಆದರೆ ಅವರು ಅನಿರ್ದಿಷ್ಟವಾಗಿ ಹೇಳುತ್ತಿದ್ದಾರೆ, ಯಾವುದೇ ಕಾರಣಕ್ಕೆ ಸಸ್ಪೆಂಡ್ ಮತ್ತು ಇದನ್ನು ರದ್ದು ಮಾಡದೆ ಹೋದರೆ ನಾವು ಕಾರ್ಮಿಕರು ಕೆಲಸಗಳಿಗೆ ಹೋಗುವುದಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಆ ಕಾರಣಕ್ಕೆ ನಮಗೆ ಉಳಿದಿರತಕ್ಕಂತಹ ದಾರಿ ಸಂಧಾನ. ನಾವು ಪ್ರಯತ್ನ ಮಾಡುತ್ತಿದ್ದೇವೆ. ಇವತ್ತೂ ಸಹ ಮುಂದುವರೆಸಿ ಪ್ರಯತ್ನ ಮಾಡುತ್ತೇವೆ. ಅವರು ಏನಾದರೂ ಹೊಂದಾಣಿಕೆಗೆ ಬಾರದೆ ಇದ್ದರೆ ಕಾನೂನು ರೀತ್ಯ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಸುರೇಶ್‌ಕುಮಾರ್ : ಆರೇಳು ದಿವಸಗಳಿಂದ ಮುಷ್ಕರ ಮಾಡುತ್ತಿದ್ದಾರೆ. ಇದು ಅವರ ಬಹಳ ಸರಳವಾದ ಬೇಡಿಕೆ. ಯಾರನ್ನು ವಿನಾ ಕಾರಣ ಅಮಾನತ್ತು ಮಾಡಿದ್ದೀರಿ, ಕಾರಣ ಇಲ್ಲದೆ ವರ್ಗಾವಣೆ ಮಾಡಿದ್ದಾರೆ, ಅದನ್ನು ಕ್ಯಾನ್ಸಲ್ ಮಾಡಿ ಎಂದು ಅವರು ಅದನ್ನು ವಾಪಸ್ ತೆಗೆದುಕೊಂಡು ಪೆಂಡಿಂಗ್ ಎನ್‌ಕ್ವೈರಿ ವಾಪಸ್ ತೆಗೆದುಕೊಂಡರೆ ಇವತ್ತೇ ಹಾಜರಾಗುತ್ತಾರೆ. ಆರೇಳು ದಿವಸಗಳಿಂದ ಊಟ ಇಲ್ಲದೆ, ಸಂಬಳ ಇಲ್ಲದೆ ಹೋರಾಟ ನಡೆಸುತ್ತಿದ್ದಾರೆ. ಮ್ಯಾನೇಜ್‌ಮೆಂಟ್‌ನವರು ಕೊಬ್ಬು ತೋರಿಸುತ್ತಿದ್ದಾರೆ. ದಯವಿಟ್ಟು ಕಾರ್ಮಿಕ ಮಂತ್ರಿಗಳ ಹೆಸರು ಹೇಳುವುದು, ಕಾರ್ಮಿಕ ಮಂತ್ರಿಗಳು ಇವರ ನೋವನ್ನು ದುಃಖ ದುಮ್ಮಾನವನ್ನು ದಯವಿಟ್ಟು ನೀವು ಹಂಚಿಕೊಳ್ಳಿ. ಯಾವುದೋ ಒಂದು ಪಬ್ಲಿಕ್ ರಿಲೇಷನ್ ಆಫೀಸರ್ ಸ್ಟೇಟ್‌ಮೆಂಟ್ ತರಹ ಇದು ಇರಬಾರದು. ಈ ದೃಷ್ಟಿಯಿಂದ ನೀವು ಕಾರ್ಮಿಕರ ಹಿತಕ್ಕೋಸ್ಕರ ನೀವು ಸ್ವಲ್ಪ ಫ್ಲೆಕ್ಸಿಬಲ್ ಆಗಿ ಮುಂದೆ ಹೋಗಿ ಮ್ಯಾನೇಜ್‌ಮೆಂಟ್‌ಗೆ ಹೇಳಿ ಕೂಡಲೇ ಅಮಾನತ್ ವಾಪಸ್ ತೆಗೆದುಕೊಳ್ಳಿ. ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡಲಿ. ಬರುತ್ತೇವೆ ಕುಳಿತುಕೊಂಡು ಮಾತನಾಡೋಣ. ಯಾವುದೇ ಬಿಗುಮಾನದಿಂದ ಕುಳಿತರೆ ಕೆಲಸ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ನಿಲುವು ಸ್ಪಷ್ಟವಾಗಬೇಕು. ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀರೆಂದು ಹೇಳುತ್ತೀರಿ ನಿಜ. ಕಾರ್ಮಿಕರಿಗಿಂತ ಮಾಲೀಕರೇ ನಿಮಗೆ ಹತ್ತಿರ ಕಂಡ ಹಾಗೆ ಕಾಣುತ್ತಿದೆ. ದಯವಿಟ್ಟು ಮಾಲೀಕರನ್ನು ಬಂಧನದಲ್ಲಿಡುತ್ತೇವೆಂದು ಹೇಳಿ, ನೀವು ಕೂಡಲೇ ಇದು ಮಾಡಲಿಲ್ಲ ಎಂದರೆ, ಈ ಪ್ರದೇಶದಲ್ಲಿ ಅಶಾಂತ ವಾತಾವರಣ ನಿರ್ಮಾಣವಾಗುತ್ತಿದೆ. ಇದು ಹೇಳಬೇಕು. ಕಾರ್ಮಿಕರಿಗೆ ಬಹಳ ತೊಂದರೆಯಾಗುತ್ತಿದೆ. ಇದು ಹೇಳಿಲಿಲ್ಲ ಎಂದರೆ ಅವನು ಇಷ್ಟ ಬಂದ ಹಾಗೆ ಮಾಡಿಕೊಂಡು ಹೋಗುತ್ತಾರೆ. ಆ ಪರಿಸ್ಥಿತಿಗೆ ಅವಕಾಶ ಕೊಡಬೇಡಿ. ಅಮಾನತ್ತು ಮತ್ತು ವರ್ಗಾವಣೆ ಕೂಡಲೇ ರದ್ದುಪಡಿಸಿ ಸರ್ಕಾರ ಆದೇಶ ಹೊರಡಿಸುವುದಕ್ಕೆ ಹೇಳಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಂತ್ರಿಗಳು ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ನಿಮ್ಮಲ್ಲಿ ಏನು ಕಾನೂನು ಇದೆ ಹೇಳಿ. ಮಾಲೀಕರನ್ನು ಬಗ್ಗಿಸಲಿಕ್ಕೆ ನಿಮ್ಮಲ್ಲಿ ಏನು ಕಾನೂನು ಇದೆ ಹೇಳಿ. ಅಲ್ಲಿಯ ಕಾರ್ಮಿಕರ ಬೇಡಿಕೆ ಏನೆಂದರೆ ಈಗ ಮಾಡಿರುವ ವರ್ಗಾವಣೆಯನ್ನು ಕ್ಯಾನ್ಸಲ್ ಮಾಡಿ ಮತ್ತು ಅಮಾನತ್ತನ್ನು ಕ್ಯಾನ್ಸಲ್ ಮಾಡಿ ಎಂದಿದ್ದಾರೆ. ಈ ರೀತಿ ಮಾಡಿದ ಮೇಲೆ ಮಾತಕತೆಗೆ ಬರಲು ಸಿದ್ದವಿದ್ದೇವೆ ಎಂದಿದ್ದಾರೆ. ಹಾಗೆ ಮಾಡಿಸುವುದನ್ನು ಬಿಟ್ಟು ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ ಎಂದರೆ ನಿಮ್ಮಲ್ಲಿ ಏನು ಕಾನೂನು ಇದೆ ಹೇಳಿ. ಕಾರ್ಮಿಕ ಮಂತ್ರಿಯವರಿಗೆ ನಾನು ಪ್ರಾಮಾಣಿಕವಾಗಿ ಕೇಳುತ್ತಿದ್ದೇನೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆಂದರೆ ಅದರ ಅರ್ಥ ನೀವು ಲೇಬರ್ ಕೋರ್ಟಿಗೆ ಹೋಗಿ ಎನ್ನುತ್ತೀರಷ್ಟೆ. ಅದನ್ನು ಬಿಟ್ಟು ಬೇರೆ ಏನನ್ನೂ ಹೇಳುವುದಿಲ್ಲ. ಲೇಬರ್ ಕೋರ್ಟಿಗೆ ಹೋಗುವುದೇ ಆಗಿದ್ದರೆ ಅದರ ಬಗ್ಗೆ ಇಲ್ಲಿ ಚರ್ಚೆಯಾಗಬೇಕಾದ ಅವಶ್ಯಕತೆ ಇರಲಿಲ್ಲ ಮತ್ತು ಇಲ್ಲಿಯವರೆಗೂ ಹೋರಾಟ ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ಕಳೆದ 67 ದಿವಸಗಳಿಂದ ಮುಷ್ಕರ ಹೂಡಿರುವ ಆ ಕಾರ್ಮಿಕರ ಪರಿಸ್ಥಿತಿ ಏನಾಗಬೇಕು? ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀನೆಂದರೆ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ನಿಮ್ಮಲ್ಲಿ ಏನೂ ಕಾನೂನು ಇಲ್ಲ. ಕಾರ್ಮಿಕ ಇಲಾಖೆಯಲ್ಲಿ ಮಾಲೀಕರನ್ನು ಬಗ್ಗಿಸುವ ಸಲುವಾಗಿ ಯಾವುದೇ ಬಿಗಿ ಕಾನೂನು ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಒಂದು ವೇಳೆ ಇದ್ದರೆ ದಯವಿಟ್ಟು ಹೇಳಬೇಕು, ಯಾವ ಕಾನೂನಿನಡಿಯಲ್ಲಿ ನೀವು ಮಾಲೀಕರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ ಹೇಳಿ.

ಶ್ರೀ ಬಿ. ಸತ್ಯನಾರಾಯಣ : ಮಾನ್ಯ ಉಪಾಧ್ಯಕ್ಷರೇ, ನಾವು ಕಾರ್ಮಿಕ ಕಾನೂನಿನ ವ್ಯಾಪ್ತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಆ ವ್ಯಾಪ್ತಿಯೊಳಗೆ ಕಾರ್ಮಿಕರನ್ನು ಸಸ್ಪೆಂಡ್ ಮಾಡಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡಬೇಕಾಗುತ್ತದೆ. ಕಾರ್ಮಿಕರು ಹೇಳುತ್ತಾರೆ ಸಸ್ಪೆಂಡ್ ಮಾಡಿರುವುದು ಸರಿಯಿಲ್ಲವೆಂದು, ಆದರೆ ಮಾಲೀಕರು ಹೇಳುತ್ತಾರೆ ಸಸ್ಪೆಂಡ್ ಮಾಡಿರುವುದು ಸರಿಯೆಂದು. ಇದರ ಬಗ್ಗೆ ನಾವು ನೋಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಈ ವಿಚಾರ ಕಳೆದ 67 ದಿವಸಗಳಿಂದ ಸರ್ಕಾರಕ್ಕೆ ಗೊತ್ತಿಲ್ಲವೇ? ಕಳೆದ 67 ದಿವಸಗಳಿಂದ ಎಷ್ಟು ಬಾರಿ ನೀವು ಮಾತುಕತೆಗೆ ಕರೆದಿದ್ದೀರಿ ಹೇಳಿ. ನೀವು ಇದನ್ನು ಬಗೆಹರಿಸಲು ಏನು ಪ್ರಯತ್ನ ಪಟ್ಟಿದ್ದೀರಿ? ಈ ದಿಸೆಯಲ್ಲಿ ಮಾಲೀಕರ ಜೊತೆ ಎಷ್ಟು ಬಾರಿ ಮೀಟಿಂಗ್ ಕರೆದಿದ್ದೀರಿ ಹೇಳಿ?

ಶ್ರೀ ಬಿ. ಸತ್ಯಾನಾರಾಯಣ : ಮಾನ್ಯ ಉಪಾಧ್ಯಕ್ಷರೇ, ಕಾನೂನಿನಡಿಯಲ್ಲಿ ಸಂಧಾನ ಮಾಡುವುದಕ್ಕೆ ನಮಗೆ ಅವಕಾಶವಿದೆ. ಆ ಸಂಧಾನಕ್ಕೆ ಮಾಲೀಕರನ್ನು ನಾವು ಕರೆದಾಗ ಅವರು ಕಡ್ಡಾಯವಾಗಿ ಬರಲೇಬೇಕು ಎಂದು ಹೇಳಿ ಅವರನ್ನು ಕರೆಸತಕ್ಕಂಥ ಅಧಿಕಾರ ಕಾನೂನಿನಲ್ಲಿ ನಮಗೆ ಸಿಕ್ಕಿಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ಇವರ ಹತ್ತಿರ ಮಾಲೀಕರನ್ನುಮಾತುಕತೆಗೆ ಕಡ್ಡಾಯವಾಗಿ ಬರಲೇಬೇಕೆಂದು ಹೇಳುವ ಕಾನೂನೇ ಇಲ್ಲ. ಹೀಗಿರುವಾಗ ಅವರನ್ನು ಮಾತುಕತೆಗೆ ಹೇಗೆ ಕರೆಯಿಸುತ್ತಾರೆ? ಮಾಲೀಕರನ್ನು ಅರೆಸ್ಟ್ ಮಾಡಿಕೊಂಡು ಕರೆದುಕೊಂಡು ಬನ್ನಿ. ಕಾರ್ಮಿಕರ ಮೇಲಾದರೆ ನೀವು ತಕ್ಷಣ ಕೇಸ್ ಹಾಕಿ ಜೈಲಿಗೆ ಕಳುಹಿಸುವಾಗ ಮಾಲೀಕರ ಮೇಲೆ ನೀವು ಏಕೆ ಕೇಸ್ ಹಾಕಬಾರದು?

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) : ಸರ್ಕಾರ ಇರುವುದು ಕಾನೂನು ರೀತಿಯಲ್ಲಿ ಕೆಲಸ ಮಾಡುವುದಕ್ಕೆ. ಮಾನ್ಯ ಮಂತ್ರಿಗಳು ಈಗಾಗಲೇ ಕಾನೂನು ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ತಾವು ದಯವಿಟ್ಟು ನಮಗೆ ಮಾರ್ಗದರ್ಶನ ನೀಡಬೇಕು. ಸರ್ಕಾರ ಕಾನೂನು ಬಿಟ್ಟು ಯಾರ ಮೇಲಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೆ? ಕಾನೂನು ಬಿಟ್ಟು ನಾವು ಕೆಲಸ ಮಾಡುವುದಕ್ಕಾಗುತ್ತದೆಯೆ?

ಉಪಾಧ್ಯಕ್ಷರು : ಕಾನೂನು ಪ್ರಕಾರವಾಗಿಯೇ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಜಿ. ವಿ. ಶ್ರೀರಾಮ ರೆಡ್ಡಿ : ನಾನು ಮೊದಲೇ ಹೇಳಿದೆ, ಮಾಲೀಕರನ್ನು ಬಗ್ಗಿಸಲು ನಿಮ್ಮಲ್ಲಿ ಯಾವುದೇ ಕಾನೂನು ಇಲ್ಲವೆಂದು.

ಶ್ರೀ ಸಿ. ಭೈರೇಗೌಡ : ನಾವು ಕಾನೂನು ಪ್ರಕಾರವಲ್ಲದೇ ಬೇರೆ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನೀವು ದಸ್ತಗಿರಿ ಮಾಡಬೇಕೆಂದು ಹೇಳುತ್ತೀರಿ. ಯಾವ ಕಾನೂನಿನಡಿಯಲ್ಲಿ ದಸ್ತಗಿರಿ ಮಾಡಬೇಕು?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನಾನು ಹೇಳುತ್ತೇನೆ. ಕಾರ್ಮಿಕರು ಮುಷ್ಕರ ಮಾಡುತ್ತಿದ್ದಾರೆಂದು ಮಾಲೀಕರು ಕಾರ್ಮಿಕರ ಮೇಲೆ ಪೋಲೀಸ್ ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಕೊಟ್ಟರೆ ಆಗ ಕಾರ್ಮಿಕರನ್ನು ಜೈಲಿಗೆ ಕರೆದುಕೊಂಡು ಹೋಗಿ ಚಚ್ಚುತ್ತೀರಿ. ಅದೇ ರೀತಿ ನೀವು ಇಲ್ಲಿ ಮಾಲೀಕರು ಕಾರ್ಮಿಕರಿಗೆ ಸಂಬಳ ಕೊಟ್ಟಿಲ್ಲ ಮತ್ತು ಕಾರ್ಮಿಕರನ್ನು ಸಸ್ಪೆಂಡ್ ಮಾಡಿದ್ದಾರೆ ಎನ್ನುವ ಕಂಪ್ಲೇಂಟ್ ಮಾಡಿ ಮಾಲೀಕರನ್ನು ನೀವು ಅರೆಸ್ಟ್ ಮಾಡಿಸಿ. ಏಕೆ ಆ ರೀತಿಯಲ್ಲಿ ನೀವು ಮಾಡಬಾರದು? ಕಾರ್ಮಿಕರನ್ನಾದರೆ ಎಳೆದುಕೊಂಡು ಹೋಗಿ ಜೈಲಿಗೆ ಹಾಕಿ ಅವರನ್ನು ಬಟ್ಟೆಬಿಚ್ಚಿಸಿ ಹೊಡೆಯುತ್ತೀರಿ, ಮಾಲೀಕರು ಕಂಪ್ಲೇಂಟ್ ಕೊಟ್ಟರೆ ಮಾತ್ರ ಕಾರ್ಮಿಕರಿಗೆ ಈ ರೀತಿ ಮಾಡುತ್ತೀರಿ. ನೀವು ಅದೇ ರೀತಿ ಮಾಲೀಕರನ್ನು ಕರೆದುಕೊಂಡು ಬಂದು ಹಾಕಿ.

ಶ್ರೀ ಸಿ. ಭೈರೇಗೌಡ : ನಾವು ಯಾವತ್ತೂ ಕಾರ್ಮಿಕರನ್ನು ಬಟ್ಟೆಬಿಚ್ಚಿ ಹೊಡೆಸುವಂಥ ಕೆಲಸವನ್ನು ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಕಾರ್ಮಿಕರ ಮೇಲೆ ದೌರ್ಜನ್ಯ ನಿರಂತರವಾಗಿ ನಡದಿದೆ. ಒಂದು ಕಡೆ ಮಾಲೀಕರು ಮತ್ತು ಇನ್ನೊಂದು ಕಡೆ ಪೋಲೀಸರು ದೌರ್ಜನ್ಯವನ್ನು ನಡೆಸಿದ್ದಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಆ ರೀತಿಯಲ್ಲಿ ಕಾರ್ಮಿಕರನ್ನು ಬಟ್ಟೆ ಬಿಚ್ಚಿ ಹಾಕಿಸಿ ಹೊಡೆದಿರುವ ಬಗ್ಗೆ ನಾನು ಉದಾಹರಣೆ ನಿಮಗೆ ಕೊಡಲೇ? ವೆಳ್ಳಿಯಪ್ಪ ಟೆಕ್ಸ್‌ಟೈಲ್ ಕಾರ್ಖಾನೆಯಲ್ಲಿ ಏನಾಯಿತು? ಅಲ್ಲಿಂದ ಕಾರ್ಮಿಕರನ್ನು ಪೋಲಿಸ್ ಸ್ಟೇಷನ್‌ಗೆ ಕರೆದುಕೊಂಡು ಬಂದು ಹೊಡೆಸಲಿಲ್ಲವೇ?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಹಿರಿಯ ಸಚಿವರಾದ ಭೈರೇಗೌಡರವರು ಹೇಳಿದರು, ಇದನ್ನು ಕಾನೂನು ಪ್ರಕಾರವೇ ಮಾಡಬೇಕು ಎಂದು ನೀವು ಕಾನೂನು ಬಿಟ್ಟು ಮಾಡಬೇಡಿ. ನೀವು ಕರೆದ ನೆಗೋಷಿಯೇಷನ್‌ಗೆ ಆ ಮಾಲೀಕರು ಬರುವುದಿಲ್ಲ, ಮ್ಯಾನೇಜ್‌ಮೆಂಟ್ ನವರು ಬರುವುದಿಲ್ಲವೆಂದ ಮೇಲೆ ನೀವು ಮುಂದೆ ಏನನ್ನು ಮಾಡಬೇಕೆಂದಿದ್ದೀರಿ? ಕಾನೂನು ಪ್ರಕಾರವಾಗಿ ಆ ಮಾಲೀಕ ಬರಲಿಲ್ಲವೆಂದಮೇಲೆ ನಿಮ್ಮ ಮುಂದಿನ ಕ್ರಮವೇನು? ಕಳೆದ 67 ದಿವಸಗಳಿಂದ ಮುಷ್ಕರ ಮಾಡುತ್ತಿದ್ದಾರಲ್ಲಾ ಅದು ಸಿನಿಮಾ ಓಡುವ ರೀತಿಯಲ್ಲಿ ಶತದಿನೋತ್ಸವ ಆಚರಿಸಬೇಕೇ? ಆ ರೀತಿಯಾದರೆ ಕಾರ್ಮಿಕರ ಕಥೆಯೇನು?

ಉಪಾಧ್ಯಕ್ಷರು : ಮಂತ್ರಿಗಳು ಕಾನೂನು ಪ್ರಕಾರವಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರಲ್ಲಾ. ಮತ್ತಿನ್ನೇನು ಬೇಕು ನಿಮಗೆ? ಕಾನೂನು ಬಿಟ್ಟು ಏನನ್ನೂ ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು : ಎಲ್ಲರೂ ಒಟ್ಟಿಗೆ ಎದ್ದುನಿಂತು ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೇ, ಯಾವುದೇ ಒಂದು ಮ್ಯಾನೇಜ್‌ಮೆಂಟ್ ಕಾರ್ಮಿಕ ಕಾನೂನಿಗೆ ಮಣಿಯದೇ ಇದ್ದರೆ ಅಥವಾ ಸರ್ಕಾರದ ಕಾನೂನು ಪ್ರಕಾರ ನಡೆಯದೇ ಹೋದರೆ ಸರ್ಕಾರಕ್ಕೆ ಮಾಲಿಕರನ್ನು ಮಣಿಸತಕ್ಕಂಥ ಅನೇಕ ವಿಧಾನಗಳಿವೆ. ವಿದ್ಯುಚ್ಛಕ್ತಿಯನ್ನು ನೀವೇ ಆತನ ಮನೆಗೆ ಮತ್ತು ಕಾರ್ಖಾನೆಗೆ ಕೊಡುವುದು, ಕಾನೂನು ಮತ್ತು ಸುವ್ಯವಸ್ಥೆಯನ್ನು ನೀವೇ ಮೇನ್‌ಟೇನ್ ಮಾಡುವುದು, ಇದಲ್ಲದೇ ಅವರಿಗೆ ಬೇಕಾದಂಥ ಎಲ್ಲಾ ಸೌಲಭ್ಯಗಳನ್ನೂ ನೀವೇ ಕೊಡುವುದು. ಹೀಗೆ ಅನೇಕ ರೀತಿಯಿಂದ ನಾವು ಅವರಿಗೆ ಸಹಾಯ ಮಾಡುವಾಗ ಯಾವಾಗ ನಮ್ಮ ಕಾನೂನನ್ನು ವಯೋಲೇಟ್ ಮಾಡುತ್ತಾರೆ ಆಗ ಅವರನ್ನು ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲವೆಂದರೆ ಅವರು ಯಾವ ಸರ್ಕಾರಕ್ಕೂ ಮಣಿಯುವುದಿಲ್ಲ. ಯಾರಿಗೂ ಹೆದರುವುದಿಲ್ಲ. ಇದೊಂದೇ ಮ್ಯಾನೇಜ್‌ಮೆಂಟ್ ಬಗ್ಗೆ ನಾನು ಹೇಳುತ್ತಿಲ್ಲ. ಈ ಲಿಬರಲೈಸೇಶನ್ ಪಾಲಿಸಿ ಬಂದ ಮೇಲೆ ಎಲ್ಲಾ ಮ್ಯಾನೇಜ್‌ಮೆಂಟ್‌ನವರು ನಾವೇ ಸಾರ್ವಭೌಮರು ನಮ್ಮನ್ನು ಬಿಟ್ಟರೆ ಯಾರಿಲ್ಲ ಎನ್ನುವ ಹಾಗೆ ನಡೆದುಕೊಳ್ಳುತ್ತಿದ್ದಾರೆ. ನಮ್ಮದೇ ಎಲ್ಲವೂ ನಡೆಯಬೇಕು ಎನ್ನತಕ್ಕಂಥ ಭಾವನೆ ಈಗ ನಡೆಯುತ್ತಿದೆ. ಈ ಹಿಂದೆ ಟ್ರೇಡ್ ಯುನಿಯನ್‌ರವರ [illegible]

ಹೆದರಿಕೆ ಇತ್ತು, ಆದುದರಿಂದ ಆಗ ಸ್ವಲ್ಪವಾದರು ಹೆದರುತ್ತಿದ್ದರು. ಈ ಹಿಂದೆ ಒಬ್ಬ ಡೆಪ್ಯುಟಿ ಲೇಬರ್ ಕಮಿಶನರ್ ಬರುತ್ತಾನೆಂದರೆ ಸಾಕು ಅದಕ್ಕೆ ಹೆದರಿಕೊಂಡು ಕನ್ಸೀಲಿಯೇಶನ್ ಮೀಟಿಂಗ್‌ಗೆ ಹೋಗುತ್ತಿದ್ದರು. ಆದರೆ ಈಗ ಈ ಮೀಟಿಂಗ್‌ಗೆ ಯಾರನ್ನು ಕಳುಹಿಸುತ್ತಾರೆಂದರೆ ಒಬ್ಬ ಆರ್ಡಿನರಿ ಲೇಬರ್ ಆಫೀಸರನ್ನೋ ಅಥವಾ ಪಿ.ಆರ್.ಓ.ರವರನ್ನೋ ಕಳುಹಿಸುತ್ತಾರೆ. ಈ ಪರಿಸ್ಥಿತಿ ಏಕೆ ಬಂತೆಂದರೆ ಯಾವಾಗ ಅವರ ಮೇಲೆ ನಮ್ಮ ಹಿಡಿತ ಕಡಿಮೆಯಾಯಿತೋ ಅಥವಾ ಯಾವಾಗ ನಮಗೆ ಅವರು ಕಾನೂನು ಪ್ರಕಾರ ಕೊಡತಕ್ಕಂಥ ಗೌರವ ಕಡಿಮೆಯಾಯಿತೋ ಆಗಿನಿಂದ ಈ ಪರಿಸ್ಥಿತಿ ಬಂದಿದೆ. ದಯವಿಟ್ಟು ನೀವು ಆ ರೀತಿಯಲ್ಲಿ ಹೇಳಬೇಡಿ. ನಾವು ಅಸಹಾಯಕರು ನಮಗೆ ಶಕ್ತಿಯಿಲ್ಲ, ಮುಂದೆ ಏನು ಮಾಡಬೇಕೋ ನೋಡಬೇಕು, ನಾವು ಈಗ ಕಾನೂನು ಪ್ರಕಾರ ಏನು ಮಾಡಬೇಕೋ ಮಾಡಿದ್ದೇವೆ, ಇನ್ನೂ ಮುಂದೆ ಏನು ಮಾಡಬೇಕು ನೋಡಬೇಕು ಎಂದು ಹೇಳಬೇಡಿ. ಏಕೆಂದರೆ ಇದು ಕೇವಲ ಕಿರ್ಲೋಸ್ಕರ್‌ಗೆ ಸಂಬಂಧಪಟ್ಟ ಹಾಗೆ ಬರುವುದಿಲ್ಲ. ಈಗೇನಾದರೂ ಕಿರ್ಲೋಸ್ಕರ್‌ರವರು ಇದರಲ್ಲಿ ಯಶಸ್ವಿಯಾದರೆ ಮುಂದೆ ಅದೇ ರೀತಿಯಲ್ಲಿ ಹರಿಹರ ಪಾಲಿಫೈಬರ್‌ನವರು ಮಾಡಬಹುದು, ಕೆ. ಆರ್. ಮಿಲ್‌ನವರು ಮಾಡಬಹುದು, ಅಥವಾ ಬೇರೆ ಯಾವ್ಯಾವ ಕಾರ್ಖಾನೆಗಳಿವೆ ಅವರೆಲ್ಲರೂ ಇದೇ ರೀತಿಯಲ್ಲಿ ಮಾಡಬಹುದು. ದಯವಿಟ್ಟು ನೀವು ಬಿಗಿ ಬಂದೋಬಸ್ತ್ ಮಾಡಬೇಕು. ನೀವು ಮಾಲೀಕರಿಗೆ ತೊಂದರೆ ಮಾಡಬೇಕೆಂದರೆ ಸಾಕಷ್ಟು ವಿಧಾನಗಳಿವೆ. ಪೊಲ್ಯೂಷನ್ ಕಂಟ್ರೋಲ್ ಬೋರ್ಡ್ ಇದೆ, ಬಾಯ್ಲರ್ ಇನ್ಸ್‌ಪೆಕ್ಟರ್ ಇದ್ದಾರೆ, ನೀವು ಆ ರೀತಿಯ ಹತ್ಯಾರಗಳನ್ನು ಕೆಳಗೆ ಬಿಸಾಡಿ ನಮ್ಮಲ್ಲೇನೂ ಇಲ್ಲವೆನ್ನುವ ಹಾಗೆ ಮಾಡಬೇಡಿ. ಎಲ್ಲಾ ಹತ್ಯಾರಗಳನ್ನು ಉಪಯೋಗ ಮಾಡಿ ಮಾಲೀಕರನ್ನು ಬಗ್ಗಿಸತಕ್ಕಂಥ ಪ್ರಯತ್ನ ಮಾಡಿ. ಆ ಕಾರ್ಖಾನೆಯವರು ಏಕೆ ಬೇರೆ ರಾಜ್ಯಕ್ಕೆ ವರ್ಗ ಮಾಡುತ್ತಾರೆಂದರೆ ಆ ಕಾರ್ಮಿಕನೇ ಬೇಸತ್ತು ರಾಜೀನಾಮೆ ಕೊಡಲಿ ಎಂದು ಮಾಡುತ್ತಾರೆ. ಒಂದು ವೇಳೆ ಆ ಕಾರ್ಮಿಕರ ಚಟುವಟಿಕೆ ಮಾಲೀಕರ ವಿರುದ್ಧ ಜಾಸ್ತಿಯಾದರೆ ಆಗ ಒಂದು ಹತ್ತು ಜನರನ್ನು ಬೇರೆ ರಾಜ್ಯಕ್ಕೆ ವರ್ಗ ಮಾಡುವುದು, ಅಥವಾ ಆ ಯುನಿಟನ್ನು ಕ್ಲೋಸ್ ಮಾಡುವುದು, ಅಥವಾ ಪರ್ಟಿಕ್ಯುಲರ್ ಸೆಕ್ಷನನ್ನು ನಾವು ಇಲ್ಲಿಂದ ಬೇರೆ ರಾಜ್ಯಕ್ಕೆ ಶಿಫ್ಟ್ ಮಾಡಿದ್ದೇವೆ ಎಂದು ಹೇಳುವುದು, ಅಥವಾ ಅವರು ಉತ್ಪಾದನೆ ಮಾಡುವ ಪದಾರ್ಥಕ್ಕೆ ಮಾರ್ಕೆಟ್ ಇಲ್ಲವೆಂದು ಹೇಳಿ ಕ್ಲೋಸ್ ಮಾಡಿದ್ದೇವೆ ಎಂದು ಹೇಳುವುದು, ಈ ರೀತಿಯೆಲ್ಲಾ ಅವರು ಮಾಡುತ್ತಾರೆ. ಅದಕ್ಕಾಗಿ ನೀವು ಅದರ ಬಗ್ಗೆ ಕೂಲಂಕುಷವಾಗಿ ತನಿಖೆ ಮಾಡಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಿಮಗೆ ಹೆಚ್ಚಿನ ಅಧಿಕಾರವಿದೆ. ಇಷ್ಟೆಲ್ಲಾ ಸರ್ಕಾರಿ ಕಛೇರಿಗಳು ನಿಮ್ಮ ಜೊತೆ ಇದ್ದರೂ ಕೂಡ ನಮಗೆ ಏನು ಮಾಡುವುದಕ್ಕಾಗುವುದಿಲ್ಲವೆಂದು ಅಸಹಾಯಕರ ಹಾಗೆ ಹೇಳಬಾರದು.

ಶ್ರೀ ಸಿ. ಭೈರೇಗೌಡ (ಕೃಷ್ಣ ಸಚಿವರು) : ನಾವು ಅಸಹಾಯಕರು ಎಂದು ಹೇಳುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತ ಪೊಲ್ಯೂಷನ್ ಕಂಟ್ರೋಲ್ ಆಕ್ಟ್ ಇದೆ ಎಂದು ಹೇಳಿದರು. ನಿಜ. ಕೆ.ಇ.ಬಿ.ಇದೆ. ಅವುಗಳಿಗೂ ಕೂಡ ಕಾನೂನು ಇದೆ. ಆದುದರಿಂದ ನಾವು ಅಲ್ಲೂ ಕೂಡ ಕಾನೂನು ಪ್ರಕಾರವೇ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿರುವುದು. ಕೇವಲ ಕಾರ್ಮಿಕ ಕಾನೂನು ಒಂದರಿಂದಲೇ ಎನ್ನುವ ಅರ್ಥ ಬರುವುದಿಲ್ಲ. ನಾವು ಯಾವುದೇ ಕ್ರಮ ತೆಗೆದು ಕೊಳ್ಳಬೇಕಾದರೂ ಸಂಬಂಧಪಟ್ಟ ಕಾನೂನುಗಳೇನು ಇರುತ್ತವೆ ಆ ಕಾನೂನಿನಡಿಯಲ್ಲಿಯೇ ನಾವು ಕ್ರಮ

ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಬಿಟ್ಟು ಸರ್ಕಾರ ದೊಣ್ಣೆ ತೆಗೆದುಕೊಂಡು ಹೋಗಿ ಹಿಡಿದುಕೊಂಡು ಬರುವುದಕ್ಕೆ ಆಗುವುದಿಲ್ಲ. ಅಷ್ಟನ್ನೇ ನಾನು ಹೇಳಿರತಕ್ಕಂಥದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ದೊಣ್ಣೆ ತೆಗೆದುಕೊಂಡು ಹೋಗಿ ಹಿಡಿದುಕೊಂಡು ಬನ್ನಿ ಎಂದು ನಾನು ಹೇಳಲಿಲ್ಲ. ಏನು ಕಾನೂನುಗಳಿವೆ ಆ ಕಾನೂನಿನಡಿಯಲ್ಲಿ ಅವರಿಗೆ ನೀವು ಶಿಕ್ಷೆ ಕೊಡಿಸಬಹುದು ಎಂದು ಹೇಳಿದೆ.

1.40 ಪಿ.ಎಂ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾಲೀಕರು ಕೊಟ್ಟ ಕಂಪ್ಲೇಂಟ್ ಮೇಲೆ ಕಾರ್ಮಿಕರನ್ನು ಪೋಲಿಸ್ ಸ್ಟೇಷನ್‌ಗೆ ಹಾಕಬಹುದು. ಕಾರ್ಮಿಕರು ಕೊಟ್ಟ ಕಂಪ್ಲೇಂಟ್ ಮೇಲೆ ಮಾಲೀಕರಿಗೆ ಪೋಲಿಸ್ ಸ್ಟೇಷನ್‌ನಲ್ಲಿ ಹಾಕಬಾರದಾ? ಈ ದೇಶದಲ್ಲಿ ಕಾನೂನು ಇಲ್ಲವೇ? ಬೆಂಗಳೂರು ಸಿಟಿಯಲ್ಲಿ ಮೂರು ವರ್ಷಗಳಲ್ಲಿ ಎಷ್ಟು ಸಾರಿ ಕಾರ್ಮಿಕರಿಗೆ ಪೋಲಿಸ್ ಸ್ಟೇಷನ್‌ಗೆ ಹಾಕಿ ಹೊಡೆದಿದ್ದಾರೆ.

+ ಶ್ರೀ ಸಿ. ಗುರುನಾಥ್ (ಶಹಬಾದ್) : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸತ್ಯನಾರಾಯಣ್ ರವರು ಹೇಳಿರತಕ್ಕಂತಹ ವಿಷಯ ನಿಜ ಇದೆ. ವಿರೋಧ ಪಕ್ಷದ ಸದಸ್ಯರು ಹೇಳುವ ವಿಷಯ ನಿಜ ಇದೆ. ನಮ್ಮ ದೇಶದಲ್ಲಿರತಕ್ಕಂತಹ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್ ಏನಿದೆ, ಇದು ಬಹಳ ಪುರಾತನವಾದ, ಬ್ರಿಟೀಷರು ಮಾಡಿದ ಕಾನೂನು. ಅದಕ್ಕಾಗಿ ಸಮಂಜಸವಾಗಿ ಈ ದೇಶದಲ್ಲಿ ಈ ಕಾನೂನು ಬದಲಾವಣೆಯಾಗಬೇಕಾದ ವಿಷಯ ಯಾವುದೇ ರಾಜ್ಯ ಸರ್ಕಾರವೂ ಇದುವರೆಗೂ ಮಾಡಿಲ್ಲ. ದಯಮಾಡಿ ರಾಷ್ಟ್ರ ಮಟ್ಟದಲ್ಲಿ ಈಗ ಈ ನ್ಯಾಷನಲ್ ಲೇಬರ್ ಕಾನ್‌ಫರೆನ್ಸ್ ಆಗುತ್ತದೆ, ರಾಷ್ಟ್ರ ಮಟ್ಟದಲ್ಲಿ ಲೇಬರ್ ಮಿನಿಸ್ಟರ್ ಜೊತೆಗೆ ರಾಷ್ಟ್ರದ ಪ್ರಧಾನ ಮಂತ್ರಿಯವರ ಜೊತೆಗೆ ಆ ಸಂದರ್ಭದಲ್ಲಿ ಇಲ್ಲಿರತಕ್ಕಂತಹ ವಿಷಯ ಏನು ಇದೆ, ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್‌ನಲ್ಲಿ ಯಾವ ವಿಷಯ ಬದಲಾವಣೆ ಆಗಬೇಕೆಂದು ಟ್ರೈ ಪಾಸ್‌ಟೈಟ್ ಅಗ್ರಿಮೆಂಟ್ ಚರ್ಚೆಯಾಗುತ್ತದೆ. ದೇಶದಲ್ಲಿರತಕ್ಕಂತಹ ಲೇಬರ್‌ಗೆ ಸಂಬಂಧಪಟ್ಟ ವಿಷಯ. ಯಾವ ಕಾನೂನು ಬದಲಾವಣೆ ಆಗಬೇಕು, ಮಾಲೀಕರ ಪರವಾಗಿ ಯಾವ ವಿಷಯ ಬದಲಾವಣೆ, ಅವರ ಪರವಾಗಿ ಏನು ತೊಂದರೆ ಇದೆ, ಯಾವ ವಿಷಯ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್‌ನಲ್ಲಿ ಬರಬೇಕು, ಆ ವಿಷಯವನ್ನು ನಮ್ಮ ರಾಜ್ಯ ಸರ್ಕಾರದ ವತಿಯಿಂದ ಒಂದು ಸಾರಿ ಸಮಯ ತೆಗೆದುಕೊಂಡು ಚರ್ಚೆಯಾಗಬೇಕು. ಯಾವ ವಿಷಯ ಕಾನೂನಿನಲ್ಲಿ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್‌ನಲ್ಲಿ ಬದಲಾವಣೆ ಆಗಬೇಕೆಂದು ಚರ್ಚೆ ಮಾಡಿ, ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಒಳ್ಳೆಯದು ಎಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ಸಚಿವರು) : ಈಗಾಗಲೇ ನಡೆದ ಚರ್ಚೆಯನ್ನು ಅವಲೋಕಿಸಿದರೆ, ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್‌ಗೆ ತಿದ್ದುಪಡಿ ಆಗಬೇಕಾಗಿದೆ. ಇದರ ಬಗ್ಗೆ ನಾವು ಸಜೆಸ್ಟ್ ಮಾಡಬಹುದು. ಅಲ್ಲದೆ ಮೊನ್ನೆ ನಾನು ಮತ್ತು ಶ್ರೀರಾಮರೆಡ್ಡಿಯವರು ಸೇರಿಸಿಕೊಂಡು

ಕೆಲವೊಂದು ವ್ಯಾಜ್ಯಗಳನ್ನು ಬಗೆಹರಿಸಿದೆವು. ಅದರಲ್ಲಿ ಕೆಲವು ರೀತಿಯಲ್ಲಿ ನಾವು ನಮ್ಮ ವ್ಯಾಪ್ತಿ ಮೀರಿ ವ್ಯವಹಾರ ಬಗೆಹರಿಸತಕ್ಕಂತಹ ಪ್ರಾಮಾಣಿಕ ಪ್ರಯತ್ನ ಮಾಡಿ ಮುನ್ನಡೆ ಸಾಧಿಸಿದ್ದೇವೆ. ಇದು ಎರಡು ವ್ಯಕ್ತಿಗಳ ಪರ್ಸನಾಲಿಟಿ ಡಿಸ್ಪ್ಯೂಟ್ಸ್ ಬಂದ ಸಂದರ್ಭದಲ್ಲಿ ಕಾರ್ಮಿಕರ ಹಿತ ರಕ್ಷಣೆಗೋಸ್ಕರ ಇಲಾಖೆಯು ಶ್ರಮಿಸುತ್ತದೆ, ಇವತ್ತು ನಿಮಗೆ ಉದಾಹರಣೆಗೆ ಹೇಳಬೇಕೆಂದರೆ, ಈ ರಾಜ್ಯದಲ್ಲಿ ಸುಮಾರು 10,000 ಕ್ಕೂ ಹೆಚ್ಚು ಕಾರ್ಖಾನೆಗಳಿವೆ. ಆದರೆ 4,5, ಅಥವಾ ಆರು ಕಾರ್ಖಾನೆಗಳಲ್ಲಿ ಸ್ಟ್ರೈಕ್ ಲಾಕ್ ಔಟ್ ಆಗುತ್ತದೆ. ಅಂದರೆ, ರಾಜ್ಯದಲ್ಲಿ 10,000 ಕಾರ್ಖಾನೆಗಳಿಗೆ ಹೋಲಿಸಿದರೆ 5-6 ವ್ಯಾಜ್ಯಗಳು ಬರುವುದು ಸಾಮಾನ್ಯ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : 10,000 ಕಾರ್ಖಾನೆಗಳಿವೆ, ವ್ಯಾಜ್ಯ ಇರುವುದು ಸಿಕ್ಕಿರುವುದು 5-6 ಕಾರ್ಖಾನೆ, ಕಾರ್ಖಾನೆ ಮುಚ್ಚಿರುವುದು ಸಾವಿರಾರು. ಖಾಸಗಿ ಕಾರ್ಖಾನೆಗಳು ಮುಚ್ಚಿ ಅಲ್ಲಿರತಕ್ಕಂತಹ ಕಾರ್ಮಿಕರು ಬೀದಿಗೆ ಬರುವ ಪರಿಸ್ಥಿತಿ ಬಂದಿದೆ. ಮೊದಲು ಇಲ್ಲಿದ್ದ, ವಿರೋಧಿ ಸ್ಥಾನದಲ್ಲಿದ್ದ ಬೈರೇಗೌಡರು ಅಲ್ಲ ನೀವು. ಈ ಕಡೆ ಇದ್ದಿದ್ದರೆ ಎದ್ದೆದ್ದು ನಿಲ್ಲುತ್ತಿದ್ದಿರಿ. ಈಗ ಬದಲಾವಣೆ ಆಗಿದೆ. ನಿಮ್ಮ ನೀತಿ ಬದಲಾವಣೆ ಆಗಿದೆ. ನೀವು ಮೊದಲಿನ ಬೈರೇಗೌಡರು ಅಲ್ಲ.

ಶ್ರೀ ಬಿ. ಸತ್ಯ ನಾರಾಯಣ (ಕಾರ್ಮಿಕ ಸಚಿವರು) : ಅನೇಕ ವಿಷಯಗಳ ಮೇಲೆ ಕಾರ್ಖಾನೆಗಳು ಮುಚ್ಚಬೇಕಾದ ಸಂದರ್ಭ ಬರುತ್ತದೆ. ಈ ವಿಷಯದಲ್ಲಿ ಕೂಡ ಸುರೇಶ್‌ಕುಮಾರ್‌ರವರಿಗೆ ಗೊತ್ತು, ನಾನು ಮತ್ತು ಇಲಾಖೆಯ ಅಧಿಕಾರಿಗಳು ಅವರಿಗೂ ಸಹ ಪರ್ಸನಲ್ಲಾಗಿ ಈ ಸಭೆಗೆ ನಾನು ಕರೆದಿದ್ದೆ ಅವರು ಬರಲಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ನೀವು ಖಂಡಿತವಾಗಿ ಕರೆದಿಲ್ಲ, ಕರೆದಿದ್ದರೆ ನಾನು ಹೋಗುತ್ತಿದ್ದೆ. ನಾನೇನೂ ಮ್ಯಾನೇಜ್‌ಮೆಂಟ್ ಕೆಡಯವನು ಅಲ್ಲ.

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ಸಚಿವರು) : ನಾನು ಇಲ್ಲೇ ಅಧಿವೇಶನ ನಡೆಯುವ ಸಂದರ್ಭದಲ್ಲಿ ಅಲ್ಲೇ ಕುಳಿತು ಮಾತನಾಡಿ ಬನ್ನಿ ನೀವು ಎಂದು ಓರಲ್ಲಾಗಿ ಹೇಳಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಕರೆಯದೆ ಕರೆದಿದ್ದೇನೆಂದು ಗೂಬೆ ಕೂರಿಸುವ ಪ್ರಯತ್ನ ದಯವಿಟ್ಟು ಮಾಡಬೇಡಿ. ನೀವು ಕರೆದಿದ್ದರೆ ನಾನು ಬರುತ್ತಿದ್ದೆ.

ಶ್ರೀ ವಾಟಾಳ್ ನಾಗರಾಜ್ : ಅಂತಿಮವಾಗಿ ನಾಳೆ ಬೆಳಿಗ್ಗೆ ಕರೆಸಿ, ನಾವು ಬೇಕಾದರೆ ಭಾಗವಹಿಸುತ್ತೇವೆ. ಅಂತಿಮವಾಗಿ ನೋಡೋಣ. ಕಾರ್ಮಿಕರನ್ನು ಮತ್ತು ಮಾಲೀಕರನ್ನು ನೀವು ಕರೆಸಿ ಮಾತನಾಡುತ್ತೀರೆಂದು ಭರವಸೆ ಆದರೂ ಕೊಡಿ.

ಶ್ರೀ ಬಿ. ಸತ್ಯನಾರಾಯಣ : ಪ್ರಯತ್ನ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇದು ತಪ್ಪು ಅವರಿಗೆ ಐದು ನಿಮಿಷದಲ್ಲಿ ಕರೆಯಬಹುದು. ಯಶವಂತಪುರ ಪೋಲಿಸ್ ಸ್ಟೇಷನ್‌ಗೆ ಫೋನ್‌ಮಾಡಿ ಕರೆದುಕೊಂಡು ಬನ್ನಿ ಎಂದರೆ ಕರೆದುಕೊಂಡು ಬರುತ್ತಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಪ್ರಯತ್ನ ಮಾಡುತ್ತೇನೆಂದರೆ ಹೇಗೆ? ಆ ಮಾಲೀಕನಿಗೆ ಕರೆಯಿಸುವುದಕ್ಕಾಗುವುದಿಲ್ಲವೇ? ನಮಗೆ ಅನುಭವ ಇದೆ.

ಉಪಾಧ್ಯಕ್ಷರು : ಕರೆಯಿಸಿ ತಾವು ಕ್ರಮ ತೆಗೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ನಾಳೆ ಇಲ್ಲ ನಾಡಿದ್ದು ಕರೆಯಿಸಿ.

ಶ್ರೀ ಬಿ. ಸತ್ಯನಾರಾಯಣ : ಸೋಮವಾರ ಕರೆಸುತ್ತೇನೆ.

ಬಿನ್ನಿಮಿಲ್‌ನಲ್ಲಿ ಕಾರ್ಮಿಕರನ್ನು ಕೆಲಸದಿಂದ ತೆಗೆಯುತ್ತಿರುವುದು.

ಶ್ರೀ ಪಿ. ಎಸ್. ಪ್ರಕಾಶ್ (ಚಿಕ್ಕಪೇಟೆ) : ಮಾನ್ಯ ಉಪಾಧ್ಯಕ್ಷರೇ, ಚಿಕ್ಕಪೇಟೆ ವಿಧಾನ ಸಭಾ ವ್ಯಾಪ್ತಿಗೆ ಬರುವ ಅತ್ಯಂತ ಹಳೆಯದಾದ ಬಿನ್ನಿ ಪೇಟೆ ಹತ್ತಿ ಗಿರಣಿ ಕಾರ್ಖಾನೆಯಲ್ಲಿ ಕಳೆದ ಹತ್ತು ವರ್ಷಗಳ ಹಿಂದೆ 7,200 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಅದು ಆದ ಮೇಲೆ ಸ್ಟ್ರೈಕ್ ಮಾಡಿ 3,200 ಜನ ಮಾಡಿದರು. ಮತ್ತೆ ಸ್ಟ್ರೈಕ್ ಮಾಡಿ 1,300 ಜನ ಕಾರ್ಮಿಕರನ್ನು ಇಟ್ಟುಕೊಂಡರು. ಹಂತ ಹಂತವಾಗಿ ಕಾರ್ಮಿಕರನ್ನು ಕಾರ್ಖಾನೆಯಿಂದ ತೆಗೆದು ಹಾಕಿ ಮಿಲ್ ಮುಚ್ಚಿ ಹೊಸೂರಿನಲ್ಲಿರತಕ್ಕಂತಹ ಅವರ ಒಂದು ನಿವೇಶನದಲ್ಲಿ ಮಿಲ್ ಬದಲಾವಣೆ ಮಾಡಿ ಇಲ್ಲಿರತಕ್ಕಂತಹ ಮಿಲ್‌ನಲ್ಲಿ ಅಪಾರ್ಟ್‌ಮೆಂಟ್ಸ್ ಬಿನ್ನಿ ಪೇಟೆ ವಿಧಾನ ಸಭಾ ಸದಸ್ಯರು ಮಾನ್ಯ ಸಚಿವರಾದ ಶ್ರೀಮಾನ್ ಸೋಮಣ್ಣನವರ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಕೋಟ್ಯಾಂತರ ರೂಪಾಯಿ ಆಸ್ತಿ ಏನು ಇತ್ತು, ಎಸ್‌ಬಿಐ ನವರಿಗೆ ಸುಮಾರು ಮೂರು ಎಕರೆ ಜಮೀನನ್ನು ಮಾರಿದ್ದಾರೆ. ಈಗ 1,300 ಜನ ವರ್ಕರ್ಸ್‌ನಲ್ಲಿ 700 ಜನರಿಗೆ ತೆಗೆಯುತ್ತೇವೆಂದು ನೋಟಿಸ್ ಬೋರ್ಡ್ ಹಾಕಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಲೇಬರ್ ಕಮಿಷನರ್ ಇದರ ಬಗ್ಗೆ ಏನಾದರೂ ಕನ್‌ಸೀಲಿಯೇಷನ್ ಮಾತುಕತೆಗೆ ಫಿಕ್ಸ್ ಮಾಡಿದ್ದೀರೋ ಇದನ್ನು ದಯಮಾಡಿ ತಿಳಿಸಬೇಕು. 10ನೇ ತಾರೀಖು ಕೊಡತಕ್ಕಂತಹ ಸಂಬಳವನ್ನು ಈ ತಿಂಗಳಿನಲ್ಲಿ ಸಂಬಳ ಕೊಡಲಿಲ್ಲ. ಅವರು ಬಡ ಕುಟುಂಬದ ಕಾರ್ಮಿಕ. ಅವರು ತಿನ್ನುವುದಕ್ಕೆ ಅನ್ನ ಇಲ್ಲದೆ ಬೀದಿ ಪಾಲಿಗಿದ್ದಾರೆ. ಆ ಸಂಬಳ ಕೂಡಲೇ ಕೊಡಿಸುವ ವ್ಯವಸ್ಥೆ ಮಾಡಬೇಕು. ಸರ್ಕಾರ ಏನು ಅವರಿಗೆ ಕರೆಂಟ್ ನೀರು ಪೂರೈಕೆ ಮಾಡುತ್ತಿದೆ, ಅದನ್ನು ಬಂದ್ ಮಾಡಿಸಬೇಕು. ಮತ್ತು ನಗರ ಪಾಲಿಕೆಗೆ ಸುಮಾರು 29 ಲಕ್ಷ ರೂಪಾಯಿ ಅವರು ತೆರಿಗೆಯನ್ನು ಕೊಡಬೇಕು, ಅದನ್ನು ಕೂಡ ಬೆಂಗಳೂರು ನಗರ ಪಾಲಿಕೆಯವರು ಕೇಳಿಲ್ಲ ಈ ರೀತಿಯಾಗಿ ಬಹಳ ನಾಜೂಕಾಗಿ ಹಂತ ಹಂತವಾಗಿ ಕಾರ್ಮಿಕರಿಗೆ ಕಡಿಮೆಮಾಡಿ ಏನು 600 ಜನ ಉಳಿಸಿಕೊಂಡಿದ್ದಾರೆ ಅದನ್ನು ಮುಚ್ಚಿ ಹೊಸೂರಿನಲ್ಲಿ ಈ ಫ್ಯಾಕ್ಟರಿಯನ್ನು ಶಿಫ್ಟ್ ಮಾಡಿ ಇದನ್ನು ಕಮರ್ಷಿಯಲ್ ಕಾಂಪ್ಲೆಕ್ಸ್ ಮಾಡುವುದಕ್ಕೆ ಬಿನ್ನಿ ಮಿಲ್‌ನವರು ಹೊರಟಿದ್ದಾರೆ. ಇದೇ ರೀತಿಯಾಗಿ ರಾಜ ಮಿಲ್‌ಗೂ ಕೂಡ ಬೆಂಕಿ ಹಾಕಿ ಮುಚ್ಚಿ ಹಾಕಿದ್ದಾರೆ. ರಾಜ ಮಿಲ್ ಬೆಂಗಳೂರು ನಗರದ ಅತ್ಯಂತ ಹಳೆಯದಾದ ಮಿಲ್. ಆ ಮಿಲ್‌ಗೆ ಬೆಂಕಿ ಹಾಕಿ ಅಲ್ಲಿರತಕ್ಕಂತಹ ಜನರಿಗೆ ಮಿನರ್ವ ಮಿಲ್‌ಗೆ ಶಿಫ್ಟ್ ಮಾಡಿದ್ದಾರೆ. ಅದೇ ರೀತಿಯಾಗಿ ಬಿನ್ನಿ ಮಿಲ್ ಆಗುತ್ತದೆ. ದಯವಿಟ್ಟು ಸರ್ಕಾರ ಮಧ್ಯ ಪ್ರವೇಶಿಸಿ ಮತ್ತೆ 700 ಜನ ಕಾರ್ಮಿಕರನ್ನು ತೆಗೆಯುವ